ಉದಯವಾಣಿ
ಸಾಪ್ತಾಹಿಕ ಸಂಪದ

# ಶುಕ್ರವಾರ ಸೂರ್ಯನಿಗೆ ಕಂಕಣ



ಡಾ. ಎ. ಪಿ. ಭಟ್


ಉತ್ಸವಾದಿಗಳಲ್ಲಿ, ಮದುವೆ, ಉಪನಯನ ಮೊದಲಾದ ಶುಭಕಾರ್ಯಗಳಲ್ಲಿ ಏನೂ ತೊಂದರೆ ಬಾರದಿರಲೆಂದು ನಿರ್ವಿಘ್ನವಾಗಿ ಕಾರ್ಯನಡೆಯಲೆಂದು ಯಜಮಾನ ಕಂಕಣ ಧರಿಸುವುದುಂಟು, ನಾಡಿದ್ದು ಜನವರಿ 15 ಶುಕ್ರವಾರ ನಮ್ಮ ಸೂರ್ಯನಿಗೂ ಒಂದು ಕಂಕಣ ಧಾರಣೆಯಾಗಲಿದೆ. ಮಧ್ಯಾಹ್ನ 1.20ಕ್ಕೆ ಸ್ಥಳ: ಕನ್ಯಾಕುಮಾರಿ, ರಾಮೇಶ್ವರ, ತಿರುನಲ್ವೇಲಿ, ಚಿದಂಬರಂ.... ಸಮಯ ಸುಮಾರು 10 ನಿಮಿಷಗಳ ಕಾಲ. ನೋಡಬೇಕನ್ನುವವರು ಈ ಸ್ಥಳಗಳಿಗೆ ಹೋಗಬೇಕು. ಇದೊಂದು ಸುಂದರ ಸೂರ್ಯಗ್ರಹಣ.

ಸೂರ್ಯನ ಸುತ್ತ ತಿರುಗುತ್ತಿರುವ ಭೂಮಿ ಹಾಗೂ ಭೂಮಿಯ ಸುತ್ತ ತಿರುಗುತ್ತಿರುವ ಚಂದ್ರ ಒಂದೇ ನೇರಕ್ಕೆ ಬಂದಾಗ ಸೂರ್ಯನಿಂದ ಹೊರಟ ಬೆಳಕು ಕೊನೆಯಲ್ಲಿರುವವರಿಗೆ ತಲುಪುವುದಿಲ್ಲ. ಅದಕ್ಕೆ ಮಧ್ಯದಲ್ಲಿರುವವರ ನೆರಳು ಅಂಟುವುದೇ ಗ್ರಹಣ. ಸೂರ್ಯ ಭೂಮಿಯ ನಡುವೆ ಚಂದ್ರ ಬಂದಾಗ ಭೂಮಿಯಲ್ಲಿರುವ ನಮಗೆ ಸೂರ್ಯನ ಬಿಂಬವನ್ನು ಚಂದ್ರ ಮರೆಮಾಡುವುದು ಅಮಾವಾಸ್ಯೆಯಂದು ನಡೆಯುವ ಸೂರ್ಯಗ್ರಹಣ. ಸೂರ್ಯ ಚಂದ್ರರ ನಡುವೆ ಭೂಮಿ ಬಂದಾಗ ಭೂಮಿಯ ನೆರಳು ಚಂದ್ರನ ಮೇಲೆ ಬಿದ್ದು ಹುಣ್ಣಿಮೆಯ ದಿನ ಚಂದ್ರಗ್ರಹಣವಾಗುತ್ತದೆ. ಇದೊಂದು ಪ್ರಕೃತಿ ನಿರ್ಮಿತ ನೆರಳು ಬೆಳಕಿನ ಆಟ. ಈ ಆಟ ಪ್ರತೀ ಹುಣ್ಣಿಮೆ, ಅಮಾವಾಸ್ಯೆಗಳಲ್ಲಿ ನಡೀಬೇಕಿತ್ತು. ಆದರೆ, ಚಂದ್ರ ತನ್ನ ಕಕ್ಷಾ ಸಮತಲವನ್ನು ಭೂಮಿಯ ಕಕ್ಷಾ ಸಮತಲಕ್ಕೆ 5 ಡಿಗ್ರಿ ಓರೆಯಾಗಿಸಿಕೊಂಡಿರುವುದರಿಂದ ಕೆಲ ಹುಣ್ಣಿಮೆ ಕೆಲ ಅಮಾವಾಸ್ಯೆಯಂದು ಮಾತ್ರ ಗ್ರಹಣ ಸಂಭವ.

ಖಗ್ರಾಸ ಚಂದ್ರಗ್ರಹಣದಲ್ಲಿ ಚಂದ್ರ ಸಂಪೂರ್ಣ ಮರೆಯಾದಾಗ ಕಾದ ಕಬ್ಬಿಣದಂತೆ ಕೆಂಪಾಗಿ ಕಾಣಿಸುತ್ತಾನೆ. ಹಾಗೂ ಖಗ್ರಾಸ ಸೂರ್ಯಗ್ರಹಣದಲ್ಲಿ ಹಗಲಲ್ಲೆ ಕತ್ತಲು ಕೆಲಕ್ಷಣ ಆವರಿಸಿ ಗ್ರಹ ನಕ್ಷತ್ತಗಳು ಗೋಚರಿಸುತ್ತವೆ. ಇದು ಪ್ರಕೃತಿ ಭೂಮಿಯಲ್ಲಿರುವವರಿಗೆ ಮಾತ್ರ ಕೊಟ್ಟ ಉಡುಗೊರೆ.

**ಗ್ರಹಣಗಳಲ್ಲಿ ಎರಡು ವಿಧ :** ಖಗ್ರಾಸ (ಸಂಪೂರ್ಣ) ಮತ್ತು ಪಾರ್ಶ್ವಗ್ರಹಣಾಗಳಾದರೆ ಸೂರ್ಯಗ್ರಹಣದಲ್ಲಿ ಮತ್ತೊಂದು ಹೆಚ್ಚು ಕಂಕಣ ಸೂರ್ಯಗ್ರಹಣ. ಖಗ್ರಾಸ ಸೂರ್ಯಗ್ರಹಣ ಜ್ಞಾನಿಗಳಿಗೊಂದು ಪ್ರಯೋಗ ಕಾಲ ಹೊಸ ಹೊಸ ಚಿಂತನೆಗಳಿಗೆ ಮುದ ನೀಡುವ ಕಾಲ. ಸಾಮಾನ್ಯ ಜನರಿಗೆ ಕೆಲಹೊತ್ತು ಹೆಚ್ಚೆಂದರೆ ಏಳೂವರೆ ನಿಮಿಷ ಹಗಲಲ್ಲೇ ಕತ್ತಲು ಆವರಿಸುವುದರಿಂದ ಹೆದರಿಕೆ, ಭಯ , ಆಶ್ಚರ್ಯ. ಪುನಃ ಬೆಳಕಿನ ಪ್ರವಾಹವಾದಾಗ ಆಟ ಮುಗಿಯಿತೆಂದು ನಿಟ್ಟುಸಿರು.


ಕಂಕಣ ಸೂರ್ಯಗ್ರಹಣ ಚೆಂದ. ಕೆಲಹೊತ್ತು ಸೂರ್ಯನಿಗೆ ಬಿಳಿಯ ಕಂಕಣಧಾರಣೆ. ಕತ್ತಲು ಆವರಿಸುತ್ತ ಸಂಪೂರ್ಣ ಮರೆಮಾಚುವ ಸಂದರ್ಭದಲ್ಲಿ ಹೊರಗೆ ಬಿಳಿಯ ಬೆಳಕಿನ ಬಳೆ ಉಳಿಯುವುದು, ಸೂರ್ಯ ಬಿಂಬವನ್ನು ಸಂಪೂರ್ಣ ಮರೆಮಾಚಲು ಆಗದೇ ಚಂದ್ರ ಸೋಲುವುದು ನೋಡಲು ಬಲು ಚೆಂದ.




ಪ್ರೊ. ಜಯಂತ ವಿಷ್ಣು ನಾರ್ಲಿಕರ್ ಭಾರತದ ಪ್ರಖ್ಯಾತ ಖಗೋಳ ಜ್ಞಾನಿ. ಖಗೋಳ ಜ್ಞಾನದ ಕುರಿತು ಅನೇಕಾನೇಕ ಜನಪ್ರಿಯ ಪುಸ್ತಕಗಳನ್ನು ಬರೆದು ಪ್ರಖ್ಯಾತರು. ಅವರ ಪುಸ್ತಕ ಸೆವೆನ್ ವಂಡರ್ಸ್ ಆಫ್ ಕಾಸ್ಮಾಸ್‌ನ ಮೊದಲನೇ ಅಧ್ಯಾಯದಲ್ಲಿ ಸೌರವ್ಯೂಹದ ವಿಸ್ಮಯಗಳನ್ನು ತಿಳಿಸಿರುತ್ತಾರೆ. ಸೂರ್ಯ ಭೂಮಿಯಿಂದ 15 ಕೋಟಿ ಕಿ.ಮೀ. ದೂರ ಹಾಗೂ ಚಂದ್ರ ಭೂಮಿಯಿಂದ ಬರೇ 3 ಲಕ್ಷದ 86 ಸಾವಿರ ಕಿ.ಮೀ. ದೂರದಲ್ಲಿದ್ದರೂ ನಮಗೇಕೆ ಚಂದ್ರ ಮತ್ತು ಸೂರ್ಯ ಒಂದೇ ಗಾತ್ರದಲ್ಲಿದ್ದಂತೆ ಕಾಣುವುದು? ಈ ಪ್ರಶ್ನೆಗೆ ಉತ್ತರ ಈ ದೂರಗಳ ಅನುಪಾತ 400. ಹಾಗೆಯೇ ಸೂರ್ಯ ಮತ್ತು ಚಂದ್ರರ ವ್ಯಾಸದ ಅನುಪಾತವು 400. ಇದೊಂದು ವಿಸ್ಮಯ! ಆದ್ದರಿಂದಲೇ ನಮಗೆ ಖಗ್ರಾಸ ಸೂರ್ಯಗ್ರಹಣದ ಭಾಗ್ಯ. ಆದರೆ ಚಂದ್ರನ ದೀರ್ಘ ವೃತ್ತಾಕಾರದ ಕಕ್ಷೆಯಲ್ಲಿ ಕೆಲಮೊಮ್ಮೆ ಮಾಮೂಲಿಗಿಂತ 30,000 ಕಿ.ಮೀ. ದೂರವಿರುತ್ತಾನೆ. ಅಂತೆಯೇ ಕೆಲಮೊಮ್ಮೆ 30,000 ಕಿ.ಮೀ. ಹತ್ತಿರವಿರುತ್ತಾನೆ. ಇದರಿಂದಾಗಿ ದೂರದಲ್ಲಿದ್ದಾಗ ಸೂರ್ಯಗ್ರಹಣವಾದಲ್ಲಿ ಸೂರ್ಯನ ಬಿಂಬವನ್ನು ಮರೆಮಾಡಲು ಆಗದೇ ಕಂಕಣ ಸೂರ್ಯಗ್ರಹಣವಾಗುತ್ತದೆ.

**ನಾಡಿದ್ದು , ಜನವರಿ 15ನೇ ತಾರೀಕು, ಶುಕ್ರವಾರ ಈ ಕಂಕಣ ಸೂರ್ಯಗ್ರಹಣ ಗೋಚರಿಸುವುದು ಮಧ್ಯ ಆಫ್ರಿಕದಿಂದ ಪ್ರಾರಂಭವಾಗಿ ಮಾಲ್ಡೀವ್ಸ್ , ದಕ್ಷಿಣ ಕೇರಳ, ದಕ್ಷಿಣ ತುಳುನಾಡು, ಉತ್ತರ ಶ್ರೀಲಂಕಾ, ಬರ್ಮಾ ಹಾಗೂ ಚೀನದವರಿಗೆ. ಸುಮಾರು 300 ಕಿ.ಮೀ. ಪಟ್ಟಿಯಲ್ಲಿರುವವರಿಗೆ ಕಂಕಣ.** ಉಳಿದ ಭಾಗದ ಆಫ್ರಿಕಾ, ಯುರೋಪ್, ಏಷ್ಯಾ ಭಾರತದವರಿಗೆ ಪಾರ್ಶ್ವ ಸೂರ್ಯಗ್ರಹಣ. ಭಾರತದ ರಾಮೇಶ್ವರದ ಧನುಷ್‌ಕೋಟಿಯಲ್ಲಿ 1 ಗಂಟೆ 20 ನಿಮಿಷಕ್ಕೆ ಸುಮಾರು 10.4 ನಿಷಗಳ ಕಾಲ ಕಂಕಣ, ಉಡುಪಿಗೆ ಪಾರ್ಶ್ವ ಸೂರ್ಯಗ್ರಹಣ ಸುಮಾರು 80 ಅಂಶ. ಭಾರತದ ಮೂಲೆ ಮೂಲೆಯಿಂದ ಹವ್ಯಾಸಿ ಖಗೋಳ ವೀಕ್ಷಕರು ದಕ್ಷಿಣ ತುದಿಗೆ ಈ ವಿಶೇಷ ಕಂಕಣ ಗ್ರಹಣದ ವೀಕ್ಷಣೆಗೆ ಆಗಮಿಸುತ್ತಿದ್ದಾರೆ.





ಎಂದಿಗೂ ಸೂರ್ಯನನ್ನು ಬರೀ ಕಣ್ಣಿನಿಂದ ನೋಡಬಾರದು (ಸೂರ್ಯೋದಯ ಮತ್ತು ಸೂರ್ಯಾಸ್ತದ ಕೆಲಕ್ಷಣ ಬಿಟ್ಟು) ಹಾಗೆಯೇ ಪಾರ್ಶ್ವಗ್ರಹಣ, ಖಗ್ರಾಸ, ಮತ್ತು ಕಂಕಣ ಗ್ರಹಣಗಳನ್ನು ಬರೀ ಕಣ್ಣಿನಿಂದ ನೋಡಬಾರದು. ಸೂರ್ಯನ ಪ್ರತಿಬಿಂಬವನ್ನು ಪಿನ್‌ಹೋಲ್ ಉಪಕರಣದಿಂದ ಪಡೆಯಬಹುದು. ನೀರಿನಲ್ಲಿ, ಇತರ ಯಾವುದೇ ದ್ರಾವಣದಲ್ಲಿ ನೋಡ ಬಾರದು, ಕರ್ನಾಟಕ ರಾಜ್ಯ ಜ್ಞಾನ ಪರಿಷತ್ ವಿತರಿಸುತ್ತಿರುವ ಕಪ್ಪು ಕನ್ನಡಕಗಳನ್ನ ಧರಿಸಿ ನೋಡಬಹುದಾಗಿದೆ.

# ರೈತ ತೀರ್ಪು

ಈರಯ್ಯ ಕಿಲ್ಲೇದಾರ

**ರೈತರ ಸ್ಥಾನ ಯಾವುದು ಎಂಬುದನ್ನು ತೋರಿಸಿಕೊಡುವ ಅಪರೂಪದ ಪ್ರಸಂಗ ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದಿದೆ. ಇಂಥ ರೈತ ಆದಾಲತ್‌ಗೆ ಅವಕಾಶ ಮಾಡಿಕೊಟ್ಟ ಡೆಕ್ಕನ್ ಡೆವಲಪ್‌ಮೆಂಟ್ ಸೊಸೈಟಿ, ಕೃಷಿ ಮಾಧ್ಯಮ ಕೇಂದ್ರ, ಶಿರಸಿಯ 'ಅಪ್ಪಿಕೋ' ಸಂಘಟನೆ, ಹಿತ್ತಲಗಿಡ ಮತ್ತು ಇಕ್ರಾ ಸಂಸ್ಥೆಗಳ ಪ್ರಯತ್ನ ಸ್ತುತ್ಯರ್ಹ ಎನಿಸಿದೆ. ಆಯೋಗಗಳ ವರದಿಗಳಂತೆ ತೀರ್ಪುಗಳು ಕಪಾಟಿನಲ್ಲಿ ಗೆದ್ದಲು ಹಿಡಿಯದೆ, ಕೆಲವೊಂದಾದರೂ ಶಿಫಾರಸುಗಳು ಜಾರಿಗೆ ಬಂದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದೊಂದು ಯಶಸ್ವಿ ಪ್ರಯೋಗ ಎನಿಸಬಲ್ಲದು.**

ಸಭೆ ಸಮಾರಂಭಗಳಲ್ಲಿ ವೇದಿಕೆ ಏರಿದವರಲ್ಲ. ಭಾಷಣ ಮಾಡಿದವರಲ್ಲ. ಕೆಲವರಂತೂ ಮೊಟ್ಟ ಮೊದಲ ಸಲ ಬೆಂಗಳೂರನ್ನು ನೋಡಿದವರು. ರಾತ್ರಿ ಮನೆಯವರಿಂದ ಸಂಚಾರಿ ದೂರವಾಣಿ ಮೂಲಕ ಹತ್ತಿ ಬಿಡಿಸುವ, ಭತ್ತ ಕಟಾವು ಮಾಡುವ, ಮಳೆ ಆಗಿರುವ ಸುದ್ದಿ ಕೇಳಿ 'ಅಯ್ಯೋ ಕೆಲಸಾ ಬೊಗಸಿ ಬಿಟ್ಟಗಾದಿ ಮ್ಯಾಲ ಕುಂತ ಕುಂತ ಬ್ಯಾಸರಾಗೇತಿ' ಎಂದು ಮರುಕ ಪಡುತ್ತಿದ್ದರು. ಕೃಷಿರಂಗದಲ್ಲಾದ ಬದಲಾವಣೆ, ಹೊಸ ಹೊಸ ಆವಿಷ್ಕಾರಗಳು, ಕೃಷಿ ಸಾಗುತ್ತಿರುವ ಹಾದಿ, ತಾವು ಸವೆಸಿದ ಹಾದಿ, ಕೃಷಿರಂಗದಷ್ಟೇ ಕೃಷಿರಂಗದ ಸಮಸ್ಯೆಗಳು ಬೃಹದಾಕಾರವಾಗಿ ಬೆಳೆದಿವೆ ಎಂಬುದನ್ನು ಕೇಳಿ ಆಶ್ಚರ್ಯಪಡುತ್ತಿದ್ದರು. ತಮಗೊಂದು ಮರ್ಯಾದೆಯ ಸ್ಥಾನ ಕೊಟ್ಟಿದ್ದಾರಲ್ಲ! ಎಂದು ಪುಳಕಗೊಳ್ಳುತ್ತಿದ್ದರು. ಪ್ರತಿ ಜಿಲ್ಲೆಯಿಂದ ಒಬ್ಬಿಬ್ಬರು ರೈತರು ಬಂದಿದ್ದರು. 'ನೀವು ನ್ಯಾಯಾಧೀಶರು', 'ಅನ್ನದಾತರು', 'ದೇಶದ ಬೆನ್ನೆಲುಬು' ಎಂಬ ಹೊಗಳಿಕೆಯ ಮಾತುಗಳು ಕೇಳಿಬರುತ್ತಿದ್ದವು.

ಇಷ್ಟು ವರ್ಷ ನಮ್ಮನ್ಯಾರೂ ಕೇಳಿರಲಿಲ್ಲ. ನಿಮಗೆ ಯಾವ ರೀತಿಯ ಸಂಶೋಧನೆಗಳು ಬೇಕು. ಎಂಥಹ ಸಹಾಯ ಸವಲತ್ತುಗಳು ಬೇಕು. ಒಂದು ಗ್ರಾಮಸಭೆಯಲ್ಲೂ ರೈತರ ಬದುಕಿನಲ್ಲಾದ ಪಲ್ಲಟಗಳನ್ನು ಕುರಿತು, ಅವರ ಬದುಕನ್ನು ಉತ್ತಮವಾಗಿಸಲು ಎಂಥ ಯೋಜನೆಗಳು ಬೇಕೆಂದು ಯಾರೂ ಕೇಳಿಲ್ಲ. ಆತ್ಮಹತ್ಯೆಯಂತಹ ದಾರುಣ ಸ್ಥಿತಿಗೆ ತಲುಪಿದಾಗ್ಯೂ ರೈತರಿಗೇನಾಗಿದೆ. ಏನು ಮಾಡಿದರೆ ರೈತರ ಸ್ಥಿತಿಗತಿ ಸುಧಾರಿಸಬಲ್ಲದು ಎಂಬ ಬಗ್ಗೆ ಆಳುವವರು ಕೇಳಲಿಲ್ಲ. ಆತ್ಮಸ್ಥೈರ್ಯದಿಂದ ಬದುಕಲು ಹೇಳಿದ್ದರು ಹೊರತು ಆತ್ಮಹತ್ಯೆಯನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ. ಭೂಮಿತಾಯಿಗಿರುವ ತಾಳ್ಮೆ ಹಾಗೂ ಸಹನೆಯನ್ನು ಮೈಗೂಡಿಸಿಕೊಂಡ ರೈತರಿಗೆ ಪ್ರತಿಭಟನೆ ಮಾಡುವ ತಾಕತ್ತಿಲ್ಲ. ಹೇಳಿದ್ದಕ್ಕೆಲ್ಲ ಮೂಕಬಸವನಂತೆ ನೊಗ ಹೊತ್ತ ರೈತರಿಗೆ ಇದ್ದುದರಲ್ಲೇ ರೈತ ಸಂಘ ಧ್ವನಿ ಕೊಟ್ಟಿತ್ತು. ಅಡಿಕೆ ಪತ್ರಿಕೆಯಂತಹ ರೈತನ ಅನುಭವಕ್ಕೆ ಪ್ರಾಶಸ್ತ್ಯ ಕೊಟ್ಟದ್ದು ಬಿಟ್ಟರೆ, ರೈತರಿಗೆ ಧ್ವನಿ ಕೊಡುವ ಕೆಲಸಗಳು ನಡೆದೇ ಇಲ್ಲ. ಕೃಷಿ ಸಂಶೋಧನೆಯ ಪ್ರಜಾತಾಂತ್ರೀಕರಣಕ್ಕಾಗಿ ಸಮನ್ವಯ (ಆದರ್ಶ) ರೈತ ತೀರ್ಪು ಎಂಬ ವಿನೂತನ ಕಾರ್ಯಕ್ರಮ ಏರ್ಪಡಿಸಿ, ರೈತರು-ಕೃಷಿ ವಿಜ್ಞಾನಿಗಳು ಮತ್ತು ಕೃಷಿ ಸಂಶೋಧಕರ ಜೊತೆಗೆ ಸಂವಾದ ಏರ್ಪಡಿಸಿದ್ದು ದಕ್ಷಿಣ ಏಶಿಯಾ ಖಂಡದಲ್ಲೇ ಮೊದಲನೆಯದು.

ರೈತ ಸ್ನೇಹಿ, ಪರಿಸರಸ್ನೇಹಿ, ಸಾವಯವ ಮತ್ತು ನೈಸರ್ಗಿಕ ಕೃಷಿಗಳ ಬಗ್ಗೆ ಸಾವಯವ ಕೃಷಿ ಮಿಶನ್ ಅಲ್ಪಸ್ವಲ್ಪ ಆಲೋಚನೆ ಮಾಡುತ್ತ ಕಾರ್ಯನಿರತವಾಗಿದೆ. ಸರಕಾರದ ಕೃಷಿ ನೀತಿಗಳಲ್ಲಿ ಮೇಲೆ ತಿಳಿಸಿದ ಯಾವುದೇ ಕೃಷಿಗೆ ಸ್ಥಾನವಿಲ್ಲ. ಬಡ ರಾಷ್ಟ್ರಗಳ ಉದ್ಧಾರಕ್ಕೆಂದು ವಿಶ್ವ ಬ್ಯಾಂಕು ಸಾಲ ಕೊಡುತ್ತಿರುವುದು ಸರಿಯಷ್ಟೇ. ಸಾಲ ಕೊಡುವಾಗ ಹಾಕುವ ಕರಾರುಗಳು, ಇಲ್ಲಿನ ಸರಕಾರಗಳಿಗೆ ಕೊಡುವ ನಿರ್ದೇಶನ ದೇಶದ ಕೃಷಿ ಸಂಸ್ಕೃತಿಯನ್ನು ಹಾಳುಗೆಡಹುವುದಾಗಿದೆ. ಕೃಷಿಕರನ್ನು ಪರಾವಲಂಬಿಯಾಗಿಸುವ ಹಾಗೂ ಬಹುರಾಷ್ಟ್ರೀಯ ಕಂಪೆನಿಗಳ ಗುಲಾಮರನ್ನಾಗಿಸುವ ಮತ್ತು ಗಿರಾಕಿಗಳನ್ನಾಗಿಸುವುದರಲ್ಲೇ ಈ ಕರಾರುಗಳು ಯಶಸ್ವಿ ಕೆಲಸ ಮಾಡುತ್ತಿವೆ. ಗುತ್ತಿಗೆ ಕೃಷಿ ಇರಬಹುದು. ಬೀಜ ಕಾನೂನು ಇರಬಹುದು. ಹೊಸ ಕೃಷಿ ನೀತಿಗಳಿರಬಹುದು. ಎಪಿಎಂಸಿ ಕಾನೂನಿಗೆ ತಿದ್ದುಪಡಿ ಇರಬಹುದು, ಇವು ಕೆಲವು ನಿದರ್ಶನಗಳು ಮಾತ್ರ.

ರೈತ ತೀರ್ಪಿನಲ್ಲಿ ಭಾಗವಹಿಸಿ ವಾದ ಮಂಡಿಸಿದವರಲ್ಲಿ ತಳಿ ವಿಜ್ಞಾನಿಗಳು, ನಿವೃತ್ತ ಕೃಷಿ ವಿಶ್ವವಿದ್ಯಾಲಯದ ಉಪಕುಲಪತಿಗಳು, ಕೃಷಿ ಇಲಾಖೆಯ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯದ ಸಂಶೋಧಕರು ಮತ್ತು ಗ್ರಾಹಕ ಪರಿಷತ್‌ನ ಅಧ್ಯಕ್ಷರು ಮೊದಲಾದವರು ಪ್ರಮುಖರೆನಿಸಿದ್ದಾರೆ.

ಸಂಶೋಧನೆಗಳು ರೈತರ ಹೊಲದಲ್ಲಿ ನಡೆಯಬೇಕು. ನಾಲ್ಕು ಗೋಡೆಗಳ ನಡುವಿನ ಪ್ರಯೋಗಾಲಯಗಳಲ್ಲಿ ಅಲ್ಲ. ರೈತರೇ ಕಂಡುಕೊಂಡ ಆವಿಷ್ಕಾರಗಳು, ಪಾರಂಪರಿಕ ಜ್ಞಾನದ ಬಗ್ಗೆ ಸಂಶೋಧಕರೆನಿಸಿದವರು ತಿರಸ್ಕಾರದಿಂದ ನೋಡುವುದು ಸರಿಯಲ್ಲ. ಹೊಲ ಮೂಲದ ಸಮಸ್ಯೆಗಳಿಗೆ ಜಾಗತಿಕ ಪರಿಹಾರ ಸೂಕ್ತವಲ್ಲ. ಬೀಜೋತ್ಪಾದನೆಯಂತಹ ತಂತ್ರಜ್ಞಾನಗಳನ್ನು, ರೈತರಿಗೆ ತಳಿ ಸಂಶೋಧಕರು ಅವರ ಹೊಲಕ್ಕೆ ಬಂದು ಕಲಿಸಿಕೊಡಬೇಕು. ಶ್ರಮ ಮತ್ತು ಅನುಭವ ಆಧಾರಿತ ಒಕ್ಕಲುತನವನ್ನು ಬಂಡವಾಳ ಮತ್ತು ಮಾರುಕಟ್ಟೆ ಆಧಾರಿತ ಒಕ್ಕಲುತನವನ್ನಾಗಿ ಪರಿವರ್ತಿಸುವುದು ಸರಿಯಲ್ಲ. ಇತ್ತ ಸಾಂಪ್ರದಾಯಿಕ ಒಕ್ಕಲುತನದತ್ತ ಹೊರಳಿ ಬರಲಾಗದೆ, ಅತ್ತ ಹೈಟೆಕ್ ಕೃಷಿಯತ್ತ ಹೋಗಲು ಕಸುವಿಲ್ಲದೆ ತೊಳಲಾಡುತ್ತಿರುವ ರೈತರಿಗೆ ಸಂಶೋಧನೆಗಳು ಸರಿದಾರಿ ತೋರಬೇಕಿದೆ. ಸಂಚಾರಿ ಮಣ್ಣು ಪರೀಕ್ಷಾ ಕೇಂದ್ರ, ಜನ, ಜಾನುವಾರು ಮತ್ತು ಮಣ್ಣಿನ ಆರೋಗ್ಯ ಸುಧಾರಿಸುವ ಸಂಶೋಧನೆಗಳ ತುರ್ತು ಮುಖ್ಯಾಂಶಗಳಾಗಿವೆ. ಒಟ್ಟು 22 ಶಿಫಾರಸುಗಳು ತೀರ್ಪಿನ ರೂಪದಲ್ಲಿವೆ.

